**ಸಾಕ್ಷಿಯನ್ನು ದಿನಾಂಕ 31.01 .2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಮತಿ ಜೆ ಎಮ್ ವಕೀಲರಿಂದಃ**

ಮೈಸೂರಿನ ಎನ್ ಆರ್ ಮೊಹಲ್ಲಾ ಮನೆಯಲ್ಲಿ ಇದ್ದಾಗ ನನ್ನ ಮಗಳು ಗರ್ಭಿಣಿಯಾಗಿದ್ದಳು. ಮಗು ಜನಿಸಿದ 1 ವರ್ಷದ ಬಳಿಕ ವರುಣ ಗ್ರಾಮದ ಬಾಡಿಗೆ ಮನೆಗೆ ಹೋದರು. ಮಗು ಜನಿಸಿದ 1 ವರ್ಷದ ಬಳಿಕವೇ ಆ ಬಾಡಿಗೆ ಮನೆ ಮಾಡಿದ್ದರು. ನನ್ನ ಮಗಳು ನಮ್ಮ ಮನೆಯಲ್ಲಿ ಇದ್ದಾಗ ಆರೋಪಿ ಮಹದೇವಪುರದಲ್ಲಿ ವಾಸ ಇದ್ದ. ಆರೋಪಿ ನನ್ನ ಮಗಳಿಗೆ ಹೊಡೆದು ಕಿರುಕುಳ ಕೊಟ್ಟ ಬಗ್ಗೆ ದೂರು ಕೊಟ್ಟಿರುವುದಿಲ್ಲ. ಮಗು 5 ವರ್ಷ ವಯಸ್ಸಿಗೆ ಬರುವ ವರೆಗೆ ಆರೋಪಿ ಮತ್ತು ನನ್ನ ಮಗಳು ವರುಣ ಗ್ರಾಮದ ಮನೋಹರ ಎಂಬುವವರ ಮನೆಯಲ್ಲಿ ಇದ್ದರು. ನನ್ನ ಮಗಳು ಗುಂಡುರಾವನಗರಕ್ಕೆ ಟೇಲರಿಂಗ್ ಕಲಿಯಲು ಹೋಗುತ್ತಿದ್ದಳು. ಆದರೆ ಟೇಲರಿಂಗ್ ಕಲಿಯಲು ಯಾವಾಗ ಪ್ರಾರಂಭಿಸಿದ್ದರು ಎಂದು ನೆನಪಿಲ್ಲ. 2 ವರ್ಷ ಟೇಲರಿಂಗ್ ಕಲಿತ್ತು ನಂತರ ಮನೆಯಲ್ಲಿಯೇ ಬಟ್ಟೆ ಹೊಲೆಯುತ್ತಿದ್ದರು. ಮದುವೆಗಿಂತ ಮುಂಚೆ ಅವಳು ಟೇಲರಿಂಗ್ ಕಲಿಯಲು ಹೋಗುತ್ತಿರಲಿಲ್ಲ. ನನ್ನ ಮಗಳ ಬಳಿ ಸ್ಕೂಟರ್ ಇತ್ತು. ಟೇಲರಿಂಗ್ ಕಲಿಯುವ ಕಾಲಕ್ಕೆ ಅವಳು ಬಸ್ ನಲ್ಲಿ ಹೋಗುತ್ತಿದ್ದಳು. ಅವಳು ಅಗ್ರಹಾರದಲ್ಲಿ ಟೇಲರಿಂಗ್ ಕಲಿಯುತ್ತಿದ್ದ ಬಗ್ಗೆ ಗೊತ್ತಿಲ್ಲ. ಚಾಮುಂಡಿ ಬೆಟ್ಟದ ಹತ್ತಿರದಲ್ಲಿ ಅವಳು ಟೇಲರಿಂಗ್ ಕಲಿಯಲು ಹೋಗುತ್ತಿರಲಿಲ್ಲ. ಗುಂಡುರಾವ ನಗರದಲ್ಲಿ ಯಾರ ಬಳಿ ಟೇಲರಿಂಗ್ ಕಲಿಯುತ್ತಿದ್ದಳು ಎಂದು ಗೊತ್ತಿಲ್ಲ.

ಆರೋಪಿ ತನ್ನ ಜಮೀನನ್ನು ಮಾರಿ ಬಂದ ಹಣದಿಂದ ಮನೆ ಕಟ್ಟಲು ಪ್ರಾರಂಭಿಸಿದ್ದ ಎಂದರೆ ನಿಜಾ. ನಂತರ ಹಣ ಕಡಿಮೆ ಆಗಿದ್ದರಿಂದ ಖಾಸಗಿ ಬ್ಯಾಂಕ್ ನಲ್ಲಿ

ಸಾಲ ಮಾಡಿ ಮನೆ ಕಟ್ಟುತ್ತಿದ್ದ ಎಂದರೆ ನಿಜಾ. 2019 ರಲ್ಲಿ ಆರೋಪಿಗೂ ನನ್ನ ದೊಡ್ಡ ಅಳಿಯನಿಗೂ ಗಲಾಟೆ ಆಗಿತ್ತು ಎಂದರೆ ನಿಜಾ. ನನ್ನ ದೊಡ್ಡ ಅಳಿಯನಿಗೆ ಸಿದ್ದಾರ್ಥ ಲೇಔಟನಲ್ಲಿ ಮನೆ ಇದೆ ಎಂದರೆ ನಿಜಾ ಅದು ಬಾಡಿಗೆ ಮನೆ ಇದೆ. ನನ್ನ ಮಗಳು ಪಲ್ಲವಿ ಯನ್ನು ನನ್ನ ದೊಡ್ಡ ಅಳಿಯ ಆ ಮನೆಗೆ ಕರೆದುಕೊಂಡು ಹೋಗಿದ್ದರಿಂದ ಮತ್ತು ಅವರಿಬ್ಬರು ಒಟ್ಟಿಗೆ ಇದ್ದಿದ್ದರಿಂದ  ಅದು ಆರೋಪಿತನಿಗೆ ಗೊತ್ತಾಗಿ ಆ ಬಗ್ಗೆ ಗಲಾಟೆ ಆಗಿತ್ತು ಎಂದರೆ ಸರಿಯಲ್ಲ. ಆ ಗಲಾಟೆ ಕಾಲಕ್ಕೆ ನಾವು ಆರೋಪಿತನಿಗೆ ಕೇಸ್ ಹಾಕುತ್ತೇವೆ ಹೊಡೆಯುತ್ತೇವೆ ಎಂದು ಬೆದರಿಕೆ ಹಾಕಿದ್ದರಿಂದ ಆರೋಪಿ ಮನೆಬಿಟ್ಟು ಹೋಗಿದ್ದ ಎಂದರೆ ಸರಿಯಲ್ಲ. ನನ್ನ ದೊಡ್ಡ ಅಳಿಯನಿಗೂ ಆರೋಪಿಗೂ ಆಗಿದ್ದ ಗಲಾಟೆ ಬಗ್ಗೆ ಪಂಚಾಯ್ತಿ ಆಗಿತ್ತು ಎಂದರೆ ನಿಜಾ. ಆ ಪಂಚಾಯ್ತಿ ಕಾಲಕ್ಕೆ ನಾವು ಆರೋಪಿತನಿಗೆ ಬೆದರಿಕೆ ಹಾಕಿದ್ದರಿಂದ ಮನೆ ಬಿಟ್ಟು ಹೋಗಿದ್ದ ಎಂದರೆ ಸರಿಯಲ್ಲ. ಆರೋಪಿ ಮನೆಬಿಟ್ಟು ಹೋದಾಗ ನಾವು ಆ ಬಗ್ಗೆ ದೂರು ಕೊಟ್ಟಿರಲಿಲ್ಲ ಮತ್ತು ಹುಡುಕುವ ಪ್ರಯತ್ನ ಮಾಡಿರಲಿಲ್ಲ. ಆರೋಪಿ ಮನೆಬಿಟ್ಟು ಹೋದಾಗ ಸಾಲದ ಹಣ ಮಂಜೂರು ಆಗಿತ್ತು ಎಂದರೆ ನಿಜಾ. ನಾವು ಆ ಹಣದಲ್ಲೆ ಮನೆ ಸಂಪೂರ್ಣ ಮಾಡಿದ್ದೇವೆ ಎಂದರೆ ನಿಜಾ, ಗೃಹಪ್ರವೇಶ ಕಾಲಕ್ಕೆ ಆರೋಪಿಯನ್ನು ಕರೆದಿರಲಿಲ್ಲ.

ಗೃಹಪ್ರವೇಶದ ಪೂಜೆಗೆ ನನ್ನ ಅಣ್ಣ ಮತ್ತು ಅತ್ತಿಗೆ ಪೂಜೆ ಮಾಡಿದ್ದರು. ಆ ಕಾಲಕ್ಕೆ ನನ್ನ ಮಗಳು ಪಲ್ಲವಿ ನನ್ನ ಗಂಡನನ್ನು ಕರೆಸಿ ಎಂದು ಹೇಳಿರಲಿಲ್ಲ. ಗೃಹಪ್ರವೇಶ ಆಗಿ 5 ತಿಂಗಳಿಗೆ ನನ್ನ 2 ನೇ ಮಗಳ ಮದುವೆ ಆಗಿತ್ತು. ಆ ಕಾಲಕ್ಕೆ ಆರೋಪಿಯನ್ನು ಮದುವೆಗೆ ಕರೆದಿರಲಿಲ್ಲ. ಅವನ್ನು ಸಾಲ ಮಾಡಿ ಮನೆಬಿಟ್ಟು ಹೋಗಿದ್ದರಿಂದ ಆತನನ್ನು ಕರೆದಿರಲಿಲ್ಲ. ಆರೋಪಿ ಬಡವ ಎನ್ನುವ ಕಾರಣಕ್ಕೆ ಮದುವೆಗೆ ಕರೆದಿಲ್ಲ ಎಂದರೆ ಸರಿಯಲ್ಲ. ಗೃಹಪ್ರವೇಶದ ಕಾಲಕ್ಕೆ ಆರೋಪಿಯನ್ನು ಕರೆಯಿಸಿ ಅವರನ್ನು

ಒಂದುಗೂಡಿಸುವ ಪ್ರಯತ್ನ ಮಾಡಿಲ್ಲ. ಗೃಹಪ್ರವೇಶಕ್ಕೆ 2 ವರ್ಷದ ಮುಂಚೆ ಆರೋಪಿ ಮನೆಬಿಟ್ಟು ಹೋಗಿದ್ದ, ಆ ಕಾಲಕ್ಕೆ ಆರೋಪಿ ಎಲ್ಲಿ ಇದ್ದ ಎಂದು ಗೊತ್ತಿಲ್ಲ. ನನ್ನ ಮಗಳ ಕೊಲೆಯಾಗುವ 6 ತಿಂಗಳ ಮುಂಚೆ ಪಾಲು ವಿಭಾಗ ಪತ್ರ ಮಾಡಿಸಿದ್ದೆವು. ಗೃಹಪ್ರವೇಶದ ಕಾಲಕ್ಕೆ ಆರೋಪಿ ಗುಂಡುರಾವ್ ನಗರದ ಮನೆಯಲ್ಲಿ ಬಾಡಿಗೆಗೆ ವಾಸ ಇದ್ದರು ಎಂದರೆ ಗೊತ್ತಿಲ್ಲ. ಗೃಹಪ್ರವೇಶದ ಬಳಿಕ ನನ್ನ ತಂದೆ, ತಾಯಿ, ಮಗಳು ಮತ್ತು ಮೊಮ್ಮಗ ಆ ಮನೆಯಲ್ಲಿ ವಾಸ ಇದ್ದರು. ಆ ಮನೆಯ ಎದುರುಗಡೆ ನಮ್ಮ ಮನೆ ಇದೆ ಎಂದರೆ ನಿಜಾ. ನಾವು ವಾಸ ಇದ್ದ ಮನೆಯ ಮೊದಲ ಮಹಡಿಯಲ್ಲಿ ನನ್ನ ದೊಡ್ಡ ಮಗಳು ಮತ್ತು ಅಳಿಯ ವಾಸವಿದ್ದರು ಎಂದರೆ ನಿಜಾ. ಆ ಕಾಲಕ್ಕೆ ನನ್ನ ದೊಡ್ಡ ಅಳಿಯ ಪಲ್ಲವಿ ವಾಸವಿದ್ದ ಮನೆಗೆ ಹೋಗುವುದು ಬರುವುದು ಮಾಡುತ್ತಿದ್ದ ಎಂದರೆ ನಿಜಾ. ನನ್ನ ದೊಡ್ಡ ಮಗಳು ಮತ್ತು ಅಳಿಯ ಕೋವಿಡ್ ಲಾಕ್ ಡೌನ ಕಾಲಕ್ಕೆ ವರುಣ ಗ್ರಾಮದ ಮನೆಗೆ ಬಂದಿದ್ದರು. ನನ್ನ ದೊಡ್ಡ ಅಳಿಯ ಮತ್ತು ಆರೋಪಿ ನಡುವೆ ಗಲಾಟೆ ಆದ ಕೂಡಲೇ ಅವರು ವರುಣ ಗ್ರಾಮಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ನನ್ನ 2 ನೇ ಮಗಳ ಮದುವೆ 4 ವರ್ಷಗಳ ಹಿಂದೆ ಆಗಿದೆ ಆದರೆ ಯಾವ ಇಸವಿ ಎಂದು ನೆನಪಿಲ್ಲ. ಆ ಮದುವೆಯಾಗಿ 2–3 ತಿಂಗಳಿಗೆ ಪಲ್ಲವಿ ಮತ್ತು ಆರೋಪಿ ನಡುವೆ ಪಾಲು ವಿಭಾಗ ಪತ್ರ ಆಗಿತ್ತು. ನನ್ನ ಅಣ್ಣನ ಮಗಳ ಮದುವೆ ಫಿಕ್ಸ್ ಆದಾಗ ನನ್ನ ಅಣ್ಣನ ಮನೆಯವರು ಆರೋಪಿಯನ್ನು ಕರೆದುಕೊಂಡು ಬಂದಿದ್ದರು.

ನನ್ನ ಅಣ್ಣನಿಗೆ ಆರೋಪಿಯೊಂದಿಗೆ ಮೊದಲಿನಿಂದಲೂ ಮಾತುಕತೆ ಇತ್ತೋ ಇಲ್ಲವ್ರೋ  ಎಂದು ಗೊತ್ತಿಲ್ಲ. ಅವರ ಆರೋಪಿಯನ್ನು ಹೇಗೆ ಕರೆಸಿಕೊಂಡಿದ್ದರು ಎಂದು ಗೊತ್ತಿಲ್ಲ. ವಿಭಾಗ ಪತ್ರ ಮಾಡಿಕೊಂಡ ಬಳಿಕ ಆ ಮೆನೆಯಲ್ಲಿ ನನ್ನ ಮಗಳು, ಮೊಮ್ಮಗ, ತಂದೆ ತಾಯಿ ವಾಸ ಇದ್ದರು ಎಂದರೆ ಗೊತ್ತಿಲ್ಲ. ವಿಭಾಗ ಪತ್ರದ ಬಳಿಕ ಆರೋಪಿ ಗುಂಡುರಾವ ನಗರದ ಸೇತುರಾಮ ಇವರ ಮನೆಯಲ್ಲಿ ವಾಸ ಇದ್ದ

ಎಂದರೆ ಅವರ ಹೆಸರು ನನಗೆ ಗೊತ್ತಿಲ್ಲ, ಇಬ್ಬರು ಒಟ್ಟಿಗೆ ಆಲನಹಳ್ಳಿ ಮನೆಯಲ್ಲಿ ವಾಸ ಇದ್ದರು. ನಮ್ಮ ಮನೆಯ ಹಣಕಾಸಿನ ವ್ಯವಹಾರಗಳನ್ನು ನನ್ನ ಗಂಡ ಮಾಡುತ್ತಾನೆ ಎಂದರೆ ನಿಜಾ. ಖುಲಾಸೆ ಪತ್ರದ ಕಾಲಕ್ಕೆ ನನ್ನ ಗಂಡನಿಗೆ ಹುಷಾರ್ ಇಲ್ಲದೇ ಇದ್ದ ಕಾರಣ ಅವರಿಗೆ ಬ್ಯಾಂಕ್ ಗೆ ಹೋಗಲು ಆಗಿರುವುದಿಲ್ಲ. 8 ಲಕ್ಷ ರೂಪಾಯಿಗಳನ್ನು ನನ್ನ ದೊಡ್ಡ ಅಳಿಯ ಪಾವತಿ ಮಾಡಿದ್ದಾನೆ ಎಂದರೆ ಅದನ್ನು ನಾವು ನಮ್ಮ ದೊಡ್ಡ ಅಳಿಯನಿಗೆ ಕೊಟ್ಟು ಪಲ್ಲವಿಯ ಖಾತೆಗೆ ಹಾಕಿಸಿದ್ದೆವು. ಆ ಹಣವನ್ನು ನಾವು ಪಾವತಿಸಿದ್ದ ಬಗ್ಗೆ ಪೊಲೀಸರು ಕೇಳದೇ ಇದ್ದಿದ್ದರಿಂದ ಆ ಬಗ್ಗೆ ಹೇಳಿಲ್ಲ. ನನ್ನ ದೊಡ್ಡ ಅಳಿಯನಿಗೆ ಪಲ್ಲವಿ ಜೊತೆ ಸಂಬಂಧ ಇದ್ದರಿಂದ ಅವನೇ ಹಣ ಪಾವತಿಸಿದ್ದ ಎಂದರೆ ಸರಿಯಲ್ಲ. ಪ್ರವೀಣ ಆರಾಧ್ಯ ಎಂಬುವವರ ಪರಿಚಯ ಇಲ್ಲ. ಪ್ರವೀಣ ಆರಾಧ್ಯ ನನ್ನ ಮಗಳ ಖಾತೆಗೆ ಹಣ ಪಾವತಿಸಿದ ಬಗ್ಗೆ ಗೊತ್ತಿಲ್ಲ. ಈ ಪ್ರಕರಣಕ್ಕಿಂತ ಮುಂಚೆ ಯಾವುತ್ತು ಆರೋಪಿ ವಿರುದ್ಧ ದೂರು ಸಲ್ಲಿಸಿಲ್ಲ. ಆರೋಪಿ ಪಲ್ಲವಿ ಜೊತೆ ಚೆನ್ನಾಗಿ ಇದ್ದಾಗ ಮೊಬೈಲ್ ಮತ್ತು ಸಿಮ್ ನ್ನು ಕೊಡಿಸಿದ್ದ ಎಂದರೆ ನಿಜಾ ಅದನ್ನು ಪಲ್ಲವಿ ಉಪಯೋಗ ಮಾಡುತ್ತಿದ್ದಳು ಎಂದರೆ ನಿಜಾ. ಪಲ್ಲವಿ ಸಾಯುವ ಎಷ್ಟು ದಿನಗಳ ಮುಂಚೆ ಗಲಾಟೆ ಆಗಿತ್ತು ಎಂದು ನೆನಪಿಲ್ಲ.

ದಿಃ24.05.2023 ರಂದು ಪಲ್ಲವಿ ಜಿ ಆರ್ ಎಸ್ ವಾಟರ್ ಪಾರ್ಕ್ ಗೆ ಹೋಗಿದ್ದಳು ಎಂದರೆ ಸರಿಯಲ್ಲ. ನನ್ನ ಮಗಳು ಸಾಯುವವರೆಗೆ ಸಂತೋಷದಿಂದ ಇದ್ದಳು ಎಂದರೆ ಸರಿಯಲ್ಲ. ಪಾಲು ವಿಭಾಗ ಮಾಡಿಕೊಂಡ ಬಳಿಕ ಆರೋಪಿ ಪ್ರತ್ಯೇಕವಾಗಿ ವಾಸ ಇದ್ದ ಎಂದರೆ ಸರಿಯಲ್ಲ. ಆರೋಪಿ ವರುಣಾ ಮನೆಗೆ ವಾಸಕ್ಕೆ ಬಂದಿರಲಿಲ್ಲ ಎಂದರೆ ನಿಜಾ. ಕೆ ಎಸ್ ಆರ್ ಟಿ ಸಿ ಲೇಔಟನಲ್ಲಿ ನನ್ನ ತಮ್ಮ ಪಲ್ಲವಿಗೆ ಮನೆ ಮಾಡಿಕೊಟ್ಟಿದ್ದ ಎಂದರೆ ನಿಜಾ ಸಾಕ್ಷಿ ಸ್ವ ಇಚ್ಚೆಯಿಂದ ಹೇಳುತ್ತಾರೆ ಆರೋಪಿ ಸಹ ಅಲ್ಲೆ ವಾಸ ಇದ್ದ. ನಾವು ಎಷ್ಟೇ ಬುದ್ದಿ ಹೇಳಿದರು ನಮ್ಮ ದೊಡ್ಡ ಅಳಿಯ ಮತ್ತು

ಪಲ್ಲವಿ ಒಟ್ಟಿಗೆ ಇರುತ್ತಿದ್ದರಿಂದ ನಾವು ಪಲ್ಲವಿಗೆ ಕೆ ಎಸ್ ಆರ್ ಟಿ ಸಿ ಲೇಔಟನ ಮನೆ ಮಾಡಿಕೊಟ್ಟಿದ್ದೆವು ಎಂದರೆ ಸರಿಯಲ್ಲ. ಅಲ್ಲಿ ನನ್ನ ದೊಡ್ಡ ಅಳಿಯ ಸಹ ಆ ಮನೆಗೆ ಹೋಗುತ್ತಿದ್ದ ಎಂದರೆ ಸರಿಯಲ್ಲ. ಪಲ್ಲವಿ ಸಾಯುವ 1 ತಿಂಗಳ ಮೇಲೆ 1 ವಾರದ ಹಿಂದೆ ಕೆ ಎಸ್ ಆರ್ ಟಿ ಸಿ ಲೇಔಟನ ಮನೆ ಮಾಡಿದ್ದರು. ಪಲ್ಲವಿ ಮೃತಳಾದ ಬಗ್ಗೆ ಬೆಳಿಗ್ಗೆ 8 ಗಂಟೆಗೆ ನನ್ನ 2 ನೇ ಮಗಳು ನನಗೆ ಫೋನ್ ಮಾಡಿ ಹೇಳಿದ್ದಳು. ಆಗ ನಾನು, ನನ್ನ ದೊಡ್ಡ ಅಳಿಯ, ಗಂಡ, ನನ್ನ ತಂದೆ ಜೊತೆ, ನನ್ನ ದೊಡ್ಡ ಅಳಿಯನ ಕಾರಿನಲ್ಲಿ ಕೆ ಎಸ್ ಆರ್ ಟಿ ಸಿ ಲೇಔಟನ ಮನೆಗೆ ಹೋಗಿದ್ದೆ. ನಾನು ಕೆ ಎಸ್ ಆರ್ ಟಿ ಸಿ ಲೇಔಟನ ಮನೆಗೆ 5 ಬಾರಿ ಹೋಗಿದ್ದೆ. ಆ ಮನೆಯ ವಿಳಾಸ ಹೇಳಲು ಬರುವುದಿಲ್ಲ. ಕೊಲೆಯಾದ ದಿನ ಅಲ್ಲಿಗೆ ಹೋದಾಗ ನಾನು ಮೊದಲಿಗೆ ಮನೆಯ ಒಳಗಡೆ ಹೋಗಿದ್ದೆ. ನಾನು ಹೋಗುವ ಮುಂಚೆ ಆ ಮನೆಗೆ ಬೀಗ್ ಹಾಕಿತ್ತು. ನಾವು ಹೋದಾಗ ಮನೆಯ ಮಾಲೀಕರು ಅವರ ಬಳಿ ಇದ್ದ ಬೀಗದಿಂದ ಅದನ್ನು ತೆಗೆದಿದ್ದರು. ನಾನು ನೋಡಿದಾಗ ನನ್ನ ಮಗಳ ಮುಖದ ಮೇಲೆ ಮತ್ತು ಎದೆಯ ಮೇಲೆ ತರಚಿದ ಗಾಯ ಆಗಿ ರಕ್ತ ಬರುತ್ತಿತ್ತು. ನಾನು ಹೋದ ಬಳಿಕ ನನಗೆ ಪ್ರಜ್ಞೆ ತಪ್ಪಿದ್ದರಿಂದ ಮನೆಗೆ ಯಾರು, ಯಾರು ಬಂದಿದ್ದರು ಎಂದು ಗೊತ್ತಿಲ್ಲ.

ಪೊಲೀಸರು ಎಷ್ಟು ಗಂಟೆಗೆ ಅಲ್ಲಿಗೆ ಬಂದಿದ್ದರು ಎಂದು ಗೊತ್ತಿಲ್ಲ. ದೂರನ್ನು ನನ್ನ ಗಂಡನ ತಂಗಿಯ ಮಗ ಬರೆದಿದ್ದ ಅದನ್ನು ಠಾಣೆಯಲ್ಲಿ ಕೊಟ್ಟಿದ್ದಾರೆ. ಪೊಲೀಸರ ಮುಂದೆ ಮನೆ ಬಳಿ ರಘು ಆರಾಧ್ಯ ಕೈಯಲ್ಲಿ ದೂರನ್ನು ಬರೆಸಿಕೊಂಡ ಬಗ್ಗೆ ಹೇಳಿದ್ದು ನೆನಪಿಲ್ಲ. ನಾವು ಮನೆ ಬಳಿ ಹೋದಾಗ ನಾವೆಲ್ಲ ಮೆಟ್ಟಿಲು ಹತ್ತಿಕೊಂಡು ಮೊದಲ ಮಹಡಿಗೆ ಹೋಗುವಾಗ ಮೆಟ್ಟಿಲುಗಳ ಮೇಲೆ ವೈಭವ ಆರಾಧ್ಯ ಕುಳಿತಿದ್ದ ಎಂದು ಪೊಲೀಸರ ಮುಂದೆ ಹೇಳಿದ್ದೆ. ನಾವು ಹೋದಾಗ ಮನೆ ಬೀಗ್ ಹಾಕಿತ್ತು ಮತ್ತು ವೈಭವ ಆರಾಧ್ಯ ಮೆಟ್ಟಿಲುಗಳ ಮೇಲೆ ಕುಳಿತ್ತಿದ್ದ. ಪೊಲೀಸರು ಸ್ಥಳದಲ್ಲಿ ಏನು

ಮಾಡಿದರು ಎಂದು ನನಗೆ ಗೊತ್ತಿಲ್ಲ ಎಂದರೆ ಮಹಜರ ಮಾಡಿದ್ದರು ನಾನು ಆ ಕಾಲದಲ್ಲಿ ಸ್ಥಳದಲ್ಲಿ ಇರಲಿಲ್ಲ. ಪೊಲೀಸರು ಏನೇನು ತೆಗೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ನಿಜಾ. ಪೊಲೀಸ್ ಠಾಣೆಯಲ್ಲಿ ನನ್ನ ಹೇಳಿಕೆ ಪಡೆದಿದ್ದಾರೆ. ಪಲ್ಲವಿ ಸತ್ತು 1 ವಾರದ ಬಳಿಕ ಹೇಳಿಕೆ ಪಡೆದಿದ್ದಾರೆ ಆದರೆ ದಿನಾಂಕ ನೆನಪಿಲ್ಲ. ಪಲ್ಲವಿ ಮರಣ ಹೊಂದಿದಾಗ ಆರೋಪಿ ಆ ಮನೆಯಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ಪಲ್ಲವಿ ಸಾವಿಗೆ ಆರೋಪಿ ಕಾರಣವಲ್ಲ ಎಂದರೆ ಸರಿಯಲ್ಲ. ಪಲ್ಲವಿ ಸಾವಿಗೆ ಯಾರು ಕಾರಣ ಎಂದು ಗೊತ್ತಾಗದೇ ನನ್ನ ಮೊದಲ ಮಗಳ ಜೀವನ ಹಾಳು ಆಗುತ್ತದೆ ಎಂದು ಆರೋಪಿ ವಿರುದ್ಧ ದೂರು ದಾಖಲಿಸಿದ್ದೆ ಎಂದರೆ ಸರಿಯಲ್ಲ. ಆರೋಪಿಗೆ ಯಾರು ಇಲ್ಲ ಎಂದರೆ ನಿಜಾ. ಆರೋಪಿ ಅನಾಥ ಎನ್ನುವ ಕಾರಣಕ್ಕೆ ಈ ಕೇಸಿನಲ್ಲಿ ಸಿಕ್ಕಿಸಿದ್ದವು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು